**C**

**CCE PF**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 29. 03. 2019 ] **ಸಂಕೇತ ಸಂಖ್ಯೆ : 85-K**

Date : 29. 03. 2019 ] **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ / Private Fresh)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | 1909 ರಲ್ಲಿ ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ರಚಿಸಲು ಕಾರಣ<br>(A) ಮುಸ್ಲಿಂರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು<br>(B) ಯೂರೋಪಿಯನ್ನರಿಗೆ ಪ್ರತ್ಯೇಕ ಕ್ಷೇತ್ರ ರಚಿಸಲು<br>(C) ಸಿಖ್‌ರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು<br>(D) ಕ್ರೈಸ್ತರಿಗೆ ಕೆಲ ಸ್ಥಾನಗಳ ಮೀಸಲು ನೀಡಲು<br>***ಉತ್ತರ :*** (A) ಮುಸ್ಲಿಂರಿಗೆ ಪ್ರತ್ಯೇಕ ಪ್ರಾತಿನಿಧ್ಯ ನೀಡಲು | 1 |
| 2. | ಮೊದಲನೆಯ ಆಂಗ್ಲೋ–ಮೈಸೂರು ಯುದ್ಧವನ್ನು ಕೊನೆಗೊಳಿಸಿದ್ದು<br>(A) ಮೈಸೂರು ಒಪ್ಪಂದ (B) ಮದ್ರಾಸ್ ಒಪ್ಪಂದ<br>(C) ಮಂಗಳೂರು ಒಪ್ಪಂದ (D) ಶ್ರೀರಂಗಪಟ್ಟಣ ಒಪ್ಪಂದ<br>***ಉತ್ತರ :*** (B) ಮದ್ರಾಸ್ ಒಪ್ಪಂದ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | 'ನ್ಯೂ ಇಂಡಿಯಾ' ವೃತ್ತ ಪತ್ರಿಕೆಯನ್ನು ಆರಂಭಿಸಿದವರು<br>(A) ರಾಜಾ ರಾಮ್‌ಮೋಹನ ರಾಯ್ (B) ಮಹಾತ್ಮ ಗಾಂಧೀಜಿ<br>(C) ಅನಿಬೆಸೆಂಟ್ (D) ದಯಾನಂದ ಸರಸ್ವತಿ<br>***ಉತ್ತರ :*** (C) ಅನಿಬೆಸೆಂಟ್ | 1 |
| 4. | ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದ ವರ್ಷ<br>(A) 1945 (B) 1950<br>(C) 1947 (D) 1948<br>***ಉತ್ತರ :*** (D) 1948 | 1 |
| 5. | ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ<br>(A) ಅದು 15 ಖಾಯಂ ಸದಸ್ಯರನ್ನು ಹೊಂದಿದೆ<br>(B) ಅದು ವಿಶ್ವಸಂಸ್ಥೆಯ ಸಚಿವ ಸಂಪುಟವಿದ್ದಂತೆ<br>(C) ಅದು ಪ್ಯಾರಿಸ್‌ನಲ್ಲಿ ತನ್ನ ಕೇಂದ್ರ ಕಚೇರಿ ಹೊಂದಿದೆ<br>(D) ಇತ್ತೀಚಿಗೆ ಭಾರತ ಖಾಯಂ ಸದಸ್ಯತ್ವ ಪಡೆದಿದೆ<br>***ಉತ್ತರ :*** (B) ಅದು ವಿಶ್ವಸಂಸ್ಥೆಯ ಸಚಿವ ಸಂಪುಟವಿದ್ದಂತೆ | 1 |
| 6. | 'ಕಾಣದ ಹಸಿವು' ಎಂದರೆ<br>(A) ಪೌಷ್ಠಿಕತೆ (B) ಅಪೌಷ್ಠಿಕತೆ<br>(C) ಶ್ರೀಮಂತರಲ್ಲಿ ಹಸಿವು (D) ಸಮತೋಲನ ಆಹಾರ<br>***ಉತ್ತರ :*** (B) ಅಪೌಷ್ಠಿಕತೆ | 1 |
| 7. | ಕಪ್ಪು ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿರಲು ಕಾರಣ<br>(A) ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಉತ್ಪತ್ತಿಯಾಗಿದೆ<br>(B) ಕಡಿಮೆ ತೇವಾಂಶ ಸಂಗ್ರಹ ಸಾಮರ್ಥ್ಯ ಹೊಂದಿದೆ<br>(C) ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ<br>(D) ಸ್ಫಟಿಕ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ<br>***ಉತ್ತರ :*** (C) ದೀರ್ಘಕಾಲ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ದಾಮೋದರ ನದಿಕಣಿವೆ ಯೋಜನೆಯ ನಿರ್ಮಾಣದಿಂದಾಗಿರುವ ಪರಿಣಾಮ<br>(A) ದಾಮೋದರ ನದಿಯು ಬಂಗಾಳದ ದುಃಖ ನದಿಯಾಗಿ ಉಳಿದಿಲ್ಲ<br>(B) ಭೂಕುಸಿತಗಳು ಹೆಚ್ಚಾಗಿವೆ<br>(C) ಬಲಿಷ್ಠ ಭೂಕಂಪನಗಳನ್ನು ಉಂಟುಮಾಡಿದೆ<br>(D) ಪ್ರಮುಖ ಕೈಗಾರಿಕಾ ಪ್ರದೇಶಗಳು ಮುಳುಗಡೆಯಾಗಿವೆ<br>***ಉತ್ತರ :*** (A) ದಾಮೋದರ ನದಿಯು ಬಂಗಾಳದ ದುಃಖ ನದಿಯಾಗಿ ಉಳಿದಿಲ್ಲ | 1 |
| 9. | ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ<br>(A) ಮೌಲ್ಯವರ್ಧಿತ ತೆರಿಗೆ (B) ಕೇಂದ್ರ ಅಬಕಾರಿ ತೆರಿಗೆ<br>(C) ಸ್ಟ್ಯಾಂಪ್ ಶುಲ್ಕ (D) ಸೇವಾ ತೆರಿಗೆ<br>***ಉತ್ತರ :*** (C) ಸ್ಟ್ಯಾಂಪ್ ಶುಲ್ಕ | 1 |
| 10. | ಒಬ್ಬ ವ್ಯಕ್ತಿಯು 15 ಲಕ್ಷ ಬೆಲೆ ಬಾಳುವ ಕಾರನ್ನು ಕೊಂಡಿರುತ್ತಾನೆ. ಆ ಕಾರಿನಲ್ಲಿ ಕೆಲವು ತೊಂದರೆಗಳಿದ್ದರೂ ಆ ಕಾರು ಕಂಪನಿಯವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಆಗ ಆ ವ್ಯಕ್ತಿಯು ಯಾವ ವೇದಿಕೆ / ಆಯೋಗಕ್ಕೆ ದೂರು ಸಲ್ಲಿಸಬೇಕು ?<br>(A) ಜಿಲ್ಲಾ ಗ್ರಾಹಕರ ವೇದಿಕೆ<br>(B) ರಾಜ್ಯ ಗ್ರಾಹಕರ ಆಯೋಗ<br>(C) ರಾಷ್ಟ್ರೀಯ ಗ್ರಾಹಕರ ಆಯೋಗ<br>(D) ಅಂತರರಾಜ್ಯ ಗ್ರಾಹಕರ ವೇದಿಕೆ<br>***ಉತ್ತರ :*** (A) ಜಿಲ್ಲಾ ಗ್ರಾಹಕರ ವೇದಿಕೆ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $14 \times 1 = 14$ | |
| 11. | ಶುದ್ಧಿ ಚಳುವಳಿಯನ್ನು ಏಕೆ ಆರಂಭಿಸಲಾಯಿತು ?<br>***ಉತ್ತರ :***<br>ಹಿಂದೂ ಧರ್ಮದಿಂದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ಮತ್ತೆ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲು. | 1 |
| 12. | ಭಾರತೀಯ ಸೈನಿಕರು ರಾಯಲ್ ಎನ್‌ಫೀಲ್ಡ್ ಬಂದೂಕುಗಳ ಬಳಕೆಯನ್ನು ಏಕೆ ವಿರೋಧಿಸಿದರು ?<br>***ಉತ್ತರ :***<br>ಬಂದೂಕುಗಳಿಗೆ ಬಳಸುತ್ತಿದ್ದ ತುಪಾಕಿಗಳಿಗೆ ಹಂದಿ ಮತ್ತು ಹಸುವಿನ ಕೊಬ್ಬನ್ನು ಸವರಿದ್ದರಿಂದ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 13. | ಸರ್ದಾರ್ ವಲ್ಲಭಬಾಯಿ ಪಟೇಲ್‌ರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಏಕೆ ಕರೆಯಲಾಗಿದೆ ?<br>***ಉತ್ತರ :***<br>ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. | 1 |
| 14. | ಸರ್ಕಾರವು ಟಿಬೆಟಿಯನ್ ನಿರಾಶ್ರಿತರ ಸಮಸ್ಯೆಯನ್ನು ಹೇಗೆ ಪರಿಹರಿಸಿತು ?<br>***ಉತ್ತರ :***<br>ಸರ್ಕಾರ ಮೈಸೂರು ಜಿಲ್ಲೆಯ ಬೈಲಕುಪ್ಪೆ ಎಂಬಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆಗಳ ಜಮೀನನ್ನು ಮಂಜೂರು ಮಾಡಿತು. | 1 |
| 15. | ಅಮೇರಿಕಾದಲ್ಲಿ ಮೊದಲನೆಯ ಮಹಾಯುದ್ಧದ ನಂತರ ಕೃಷಿ ಉತ್ಪಾದನೆ ಕುಸಿಯಿತು. ಏಕೆ ?<br>***ಉತ್ತರ :***<br>ಆರ್ಥಿಕ ಮಹಾಕುಸಿತದಿಂದಾಗಿ ಅಮೆರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿದುದರ ಪರಿಣಾಮವಾಗಿ. | 1 |
| 16. | ನಿಶ್ಶಸ್ತ್ರೀಕರಣ ಎಂದರೇನು ?<br>***ಉತ್ತರ :***<br>* ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಬಳಕೆಯಿಂದ ನಿಲ್ಲಿಸುವುದು.<br>* ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಬಳಕೆಯಿಂದ ಸಂಪೂರ್ಣವಾಗಿ ನಿಲ್ಲಿಸುವ ನೇರ ಪ್ರಕ್ರಿಯೆ.<br>(ಯಾವುದಾದರೂ ಒಂದು) | 1 |
| 17. | 'ದಿ ರಿಪಬ್ಲಿಕ್' ಪುಸ್ತಕವನ್ನು ಯಾರು ಬರೆದಿದ್ದಾರೆ ?<br>***ಉತ್ತರ :***<br>ಪ್ಲೇಟೋ | 1 |
| 18. | ದೇವದಾಸಿ ಪದ್ಧತಿಯು ಒಂದು ಅಮಾನವೀಯ ಅಭ್ಯಾಸ. ಏಕೆ ?<br>***ಉತ್ತರ :***<br>* ಬಾಲ್ಯವಿವಾಹ ಮತ್ತು ಲೈಂಗಿಕ ಜೀತಕ್ಕೆ ದಾರಿ ಮಾಡಿಕೊಡುತ್ತದೆ.<br>* ಮಹಿಳೆಯರ ಶೋಷಣೆ<br>* ಲಿಂಗ ತಾರತಮ್ಯ (ಯಾವುದಾದರೂ ಒಂದು) | 1 |
| 19. | ಭಾರತದ ಯಾವ ರಾಜ್ಯವು ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ ?<br>***ಉತ್ತರ :***<br>ಮಧ್ಯಪ್ರದೇಶ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಭಾರತದ ಪೂರ್ವ ಕರಾವಳಿಯ ನದಿ ಮುಖಜ ಭೂಮಿಗಳಲ್ಲಿ ಕಂಡುಬರುವ ಕಾಡುಗಳಾವುವು ?<br>**ಉತ್ತರ :**<br>ಮ್ಯಾಂಗ್ರೋವ್ ಕಾಡುಗಳು | 1 |
| 21. | ಅಲ್ಯೂಮಿನಿಯಂಗೆ ನಿರ್ಮಾಣ ಕಂಪನಿಗಳಿಂದ ಹೆಚ್ಚಿನ ಬೇಡಿಕೆ ಇದೆ. ಏಕೆ ?<br>**ಉತ್ತರ :**<br>* ಉಕ್ಕು ಮತ್ತು ತಾಮ್ರಗಳ ಬದಲಿ ವಸ್ತುವಾಗಿ ನಿರ್ಮಾಣಗಳಲ್ಲಿ ಬಳಕೆಯಾಗುತ್ತಿದೆ<br>* ವಿದ್ಯುತ್ ವಾಹಕ<br>* ತುಕ್ಕು ನಿರೋಧಕ<br>* ಬಹು ಉಪಯೋಗಿ<br>* ಹಗುರವಾಗಿದೆ<br>* ಅಗ್ಗ ಮತ್ತು ಬಲಿಷ್ಠ (ಯಾವುದಾದರೂ ಒಂದು) | 1 |
| 22. | ಜನ ಸಾಂದ್ರತೆ ಎಂದರೇನು ?<br>**ಉತ್ತರ :**<br>ಪ್ರತಿ ಚದರ ಕಿಲೋಮೀಟರ್‌ನಲ್ಲಿ ವಾಸಿಸುವ ಜನರ ಸಂಖ್ಯೆಗೆ ಜನಸಾಂದ್ರತೆ ಎಂದು ಕರೆಯಲಾಗಿದೆ. | 1 |
| 23. | 1993 ರಲ್ಲಿ ಸಂವಿಧಾನದ 73ನೇಯ ತಿದ್ದುಪಡಿ ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು.<br>**ಉತ್ತರ :**<br>* ಏಕ ರೂಪದ ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲು<br>* ಅಧಿಕಾರ ವಿಕೇಂದ್ರೀಕರಣಗೊಳಿಸಲು (ಯಾವುದಾದರೂ ಒಂದು) | 1 |
| 24. | ವಿಶ್ವ ಗ್ರಾಹಕ ದಿನಾಚರಣೆಯನ್ನು ಯಾವಾಗ ಆಚರಿಸಲಾಗುತ್ತದೆ ?<br>**ಉತ್ತರ :**<br>ಪ್ರತಿ ವರ್ಷ ಮಾರ್ಚ್ 15ನೇ ತಾರೀಖಿನಂದು | 1 |
| III. | **ಎರಡು ವಾಕ್ಯಗಳಲ್ಲಿ ಉತ್ತರಿಸುವುದು :** $25 \times 2 = 50$ | |
| 25. | ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು. ಸ್ಪಷ್ಟೀಕರಿಸಿ.<br>**ಉತ್ತರ :**<br>* 'ದಿವಾನಿ' ಹಕ್ಕನ್ನು ಪಡೆಯಿತು.<br>* ಬಂಗಾಳದ ಮೇಲಿನ ಎಲ್ಲಾ ಹಕ್ಕುಗಳನ್ನು ಪಡೆಯಿತು ರೂಪಾಯಿಗಳನ್ನು ಪಡೆಯಿತು. ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷ.<br>* ಬಂಗಾಳದ ಪೂರ್ಣ ಆಡಳಿತವನ್ನು ಪಡೆಯಿತು.<br>* ದ್ವಿಪ್ರಭುತ್ವ ಪದ್ಧತಿಯ ಮೂಲಕ ಭೂಕಂದಾಯ ವಸೂಲಿ ಹಕ್ಕನ್ನು ಹೊಂದಿದರು. (ಯಾವುದಾದರೂ ಎರಡು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸಿತ್ತು ?<br>***ಉತ್ತರ :***<br>* ಬ್ರಿಟಿಷರ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕಾಗಿತ್ತು.<br>* ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚ ಭರಿಸಬೇಕಾಗಿತ್ತು.<br>* ಆಸ್ಥಾನದಲ್ಲಿ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕಾಗಿತ್ತು.<br>* ಯುರೋಪಿಯನ್ನರ ನೇಮಕಕ್ಕೆ ಅನುಮತಿ.<br>* ಯುದ್ಧ ಅಥವಾ ಸಂಧಾನಕ್ಕೆ ಅನುಮತಿ. (ಯಾವುದಾದರೂ ಎರಡು) | 2 |
| 27. | ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸಿಪಾಯಿಗಳ ಸ್ಥಿತಿಯು ಶೋಚನೀಯವಾಗಿತ್ತು. ಸಮರ್ಥಿಸಿ.<br>***ಉತ್ತರ :***<br>* ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸಿಪಾಯಿಗಳಿಗೆ ಇರಲಿಲ್ಲ.<br>* ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸುತ್ತಿದ್ದರು. | 2 |
| 28. | ಕೊಟ್ಟಿರುವ ಚಿತ್ರಕ್ಕೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :<br>(a) ಚಿತ್ರದಲ್ಲಿರುವ ವ್ಯಕ್ತಿಯನ್ನು ಹೆಸರಿಸಿ.<br>(b) ಆ ವ್ಯಕ್ತಿಯು ಬರೆದಿರುವ ಕೃತಿಯನ್ನು ಹೆಸರಿಸಿ.<br><br>***ಉತ್ತರ :***<br>(a) ಬಾಲಗಂಗಾಧರ ತಿಲಕ<br>(b) ಗೀತಾರಹಸ್ಯ | 2 |
| 29. | ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು ?<br>***ಅಥವಾ***<br>ರಷ್ಯಾದ ಅಧ್ಯಕ್ಷರಾಗಿ ಲೆನಿನ್‌ರವರ ಸಾಧನೆಗಳೇನು ?<br>***ಉತ್ತರ :***<br>* ಉಗ್ರ ರಾಷ್ಟ್ರೀಯವಾದ<br>* ಪರಕೀಯ ಶಕ್ತಿಗಳ ನಾಶ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಹಿಂಸೆಯ ವೈಭವೀಕರಣ<br>* ಜನಾಂಗೀಯ ಶ್ರೇಷ್ಠತೆ<br>* ಸಾಮ್ರಾಜ್ಯವಾದದ ವಿಸ್ತರಣೆ<br>* ನರಮೇಧಗಳಿಗೆ ಬೆಂಬಲ | 2 |
| | (ಯಾವುದಾದರೂ ನಾಲ್ಕು) 4 × ½<br>***ಅಥವಾ***<br>* ಭೂಮಿ ರೈತರಿಗೆ ಸೇರಿದು ಎಂದು ಘೋಷಿಸಿದರು.<br>* ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ಒದಗಿಸಿದರು.<br>* ಹೊಸ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಜಾರಿ ಮಾಡಿದರು.<br>* ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಜಾರಿ. | 2 |
| 30. | ಭಾರತವನ್ನು ವಿಶ್ವದ ಪ್ರಭಾವಶಾಲಿ ರಾಷ್ಟ್ರಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಏಕೆ ?<br>***ಉತ್ತರ :***<br>* ವಿಪುಲ ಜನಸಂಖ್ಯೆ<br>* ಅಪಾರ ಪ್ರಾಕೃತಿಕ ಸಂಪತ್ತು<br>* ಪರಿಣಿತ ಬೌದ್ಧಿಕ ಸಾಮರ್ಥ್ಯ<br>* ಪರಿಣಿತ ಔದ್ಯೋಗಿಕ ಸಾಮರ್ಥ್ಯ<br>* ಬಲಾಢ್ಯ ಸೈನಿಕ ಬಲ<br>* ನಿರ್ದಿಷ್ಟ ವಿದೇಶಾಂಗ ನೀತಿ (ಯಾವುದಾದರೂ ನಾಲ್ಕು) 4 × ½ | 2 |
| 31. | ಭಾರತ ಮತ್ತು ಚೀನಾಗಳ ನಡುವ ಗಡೀ ವಿವಾದವಿದ್ದರೂ ಕೂಡ ಅವುಗಳ ನಡುವಿನ ಸಂಬಂಧವನ್ನು ಹೇಗೆ ಉತ್ತಮಪಡಿಸಿಕೊಂಡಿವೆ ?<br>***ಉತ್ತರ :***<br>* 1980 ರ ದಶಕದ ನಂತರ ಚೀನಾದೊಂದಿಗೆ ದೊಡ್ಡ ಮಟ್ಟದಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕ.<br>* ಪಂಚಶೀಲ ತತ್ವ<br>* 2015 ರ ನಂತರದಲ್ಲಿ BRICS ರಾಷ್ಟ್ರಗಳ ಗುಂಪು ಪ್ರಾರಂಭಿಸಿವೆ.<br>(ಯಾವುದಾದರೂ ಎರಡು) | 2 |
| 32. | ದೊಂಬಿಯು ಒಂದು ಸಮಾಜ ಘಾತುಕ ಚಟುವಟಿಕೆ. ಏಕೆ ?<br>***ಉತ್ತರ :***<br>* ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಳು ಮಾಡುತ್ತದೆ.<br>* ಗೊಂದಲವನ್ನು ಸೃಷ್ಟಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಅಪಪ್ರಚಾರಗಳನ್ನು ನಡೆಸುತ್ತದೆ.<br>* ಅಪಾರವಾದ ಜೀವ ಹಾನಿಯುಂಟು ಮಾಡುತ್ತದೆ.<br>* ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡುತ್ತದೆ.<br>* ಕೋಮುಗಲಭೆ, ಜಾತಿಗಲಭೆ, ಜನಾಂಗೀಯ ಕಲಹಗಳಿಗೆ ದಾರಿ ಮಾಡುತ್ತದೆ.<br>(ಯಾವುದಾದರೂ ನಾಲ್ಕು) 4 × ½ | 2 |
| 33. | ಕೊಟ್ಟಿರುವ ದಕ್ಷಿಣ ಭಾರತದ ನಕ್ಷೆಯಲ್ಲಿ ಗುರುತಿಸಿರುವ ಸ್ವಾಭಾವಿಕ ವಿಭಾಗವನ್ನು ಹೆಸರಿಸಿ ಮತ್ತು ಅದರ ಯಾವುದಾದರೂ ಎರಡು ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ.<br><br>***ಉತ್ತರ :***<br>a) ಕರಾವಳಿ ಮೈದಾನಗಳು 1<br>b) ನೈಸರ್ಗಿಕ ಬಂದರು<br>* ವಿದೇಶಿ ವ್ಯಾಪಾರಾಭಿವೃದ್ಧಿ<br>* ಮೀನುಗಾರಿಕೆ<br>* ಉಪ್ಪು ಉತ್ಪಾದನೆ<br>* ಹಡಗು ನಿರ್ಮಾಣ ಕೈಗಾರಿಕೆ<br>* ಕೃಷಿ<br>* ನೌಕಾಯಾನ<br>* ಪ್ರಾವಾಸೋದ್ಯಮ (ಯಾವುದಾದರೂ ಎರಡು) 2 × ½ | 2 |
| 34. | ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಏಕೆ ?<br>***ಉತ್ತರ :***<br>* ಸ್ಥಾನ<br>* ಜಲರಾಶಿಗಳು<br>* ಮೇಲ್ಮೈ ಲಕ್ಷಣ<br>* ಮಾನ್ಸೂನ್ ಮಾರುತಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ಸಾಗರ ಪ್ರವಾಹಗಳು<br>✳ ಅಕ್ಷಾಂಶಗಳು<br>✳ ಸಮುದ್ರದಿಂದ ದೂರ (ಯಾವುದಾದರೂ ನಾಲ್ಕು) 4 × ½ | 2 |
| 35. | ಕೃಷಿಯು ದ್ವಿತೀಯ ಮತ್ತು ತೃತೀಯ ವಲಯಗಳ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ?<br>***ಉತ್ತರ :***<br>✳ ದೇಶದ ತೃತೀಯ ವಲಯದ ವೃತ್ತಿಗಳಾದ ಸಾರಿಗೆ, ವ್ಯಾಪಾರ, ಬ್ಯಾಂಕಿಂಗ್, ವಿಮೆ, ರಫ್ತು ಮುಂತಾದವುಗಳಿಗೆ ನೆರವಾಗುತ್ತದೆ.<br>✳ ಹತ್ತಿ ಸೆಣಬು, ಜವಳಿ, ಸಕ್ಕರೆ ಕೈಗಾರಿಕಗಳ ಪ್ರಗತಿಗೆ ನೆರವಾಗುವುದು.<br>✳ ರಾಸಾಯನಿಕ ಮತ್ತು ಉಪಕರಣಗಳ ಕೈಗಾರಿಕೆಗೆ ಮಾರುಕಟ್ಟೆ ಒದಗಿಸುತ್ತದೆ. (ಯಾವುದಾದರೂ ಎರಡು) | 2 |
| 36. | ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅಭಾವ ಭಾರತದ ಒಂದು ಪ್ರಮುಖ ಸಮಸ್ಯೆಯಾಗಿದೆ. ಏಕೆ ?<br>***ಉತ್ತರ :***<br>✳ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ.<br>✳ ದೇಶದಲ್ಲಿ ಕಡಿಮೆ ಪೆಟ್ರೋಲಿಯಂ ನಿಕ್ಷೇಪ, ತೈಲದ ಕೊರತೆ.<br>✳ ಕಡಿಮೆ ದರ್ಜೆಯ ಕಲ್ಲಿದ್ದಲು.<br>✳ ಅಕಾಲಿಕ ಮಳೆ ಮತ್ತು ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರಿನ ಕೊರತೆ.<br>✳ ಪ್ರಸರಣ ಪ್ರಕ್ರಿಯೆಯಲ್ಲಾಗುವ ವಿದ್ಯುತ್‌ನ ನಷ್ಟ.<br>✳ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಕಡಿಮೆ ಬಳಕೆ.<br>(ಯಾವುದಾದರೂ ನಾಲ್ಕು) 4 × ½ | 2 |
| 37. | ರಸ್ತೆ ಸಾರಿಗೆಯು ರೈಲು ಸಾರಿಗೆಗಿಂತ ಉತ್ತಮವಾಗಿದೆ. ಸ್ಪಷ್ಟೀಕರಿಸಿ.<br>***ಉತ್ತರ :***<br>✳ ರಸ್ತೆಗಳನ್ನು ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿ ನಿರ್ಮಿಸಬಹುದು.<br>✳ ಎಲ್ಲೋ ಇರುವ ಸ್ಥಳಗಳನ್ನು ಸಂಪರ್ಕಿಸುತ್ತವೆ.<br>✳ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಳನ್ನು ಸಂಪರ್ಕಿಸುತ್ತವೆ.<br>✳ ಮನೆ ಮನೆಗೆ ಸೇವೆ ಕಲ್ಪಿಸುತ್ತವೆ.<br>✳ ಗಡಿ ಪ್ರದೇಶಗಳಿಗೆ ಸೂಕ್ತವಾಗಿವೆ.<br>(ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಮಾನವ ಅಭಿವೃದ್ಧಿ ಸೂಚ್ಯಂಕ ( HDI ) ದ ರಚನೆ ಅಗತ್ಯ. ವಿವರಿಸಿ.<br>***ಉತ್ತರ :***<br>* ರಾಷ್ಟ್ರೀಯ ವರಮಾನದ ಜೊತೆ ಜೊತೆಗೆ ಜನಸಂಖ್ಯೆಯ ಹೆಚ್ಚಳವೂ ಕಂಡು ಬಂದರೆ ಅದು ಆರ್ಥಿಕ ಪ್ರಗತಿಯ ವಾಸ್ತವ ಚಿತ್ರಣ ನೀಡುವುದಿಲ್ಲ.<br>* ತಲಾವರಮಾನ ಜನರ ನಡುವಿನ ವರಮಾನ ಹಂಚಿಕೆ ತೋರಿಸುವುದಿಲ್ಲ.<br>* ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರೆ ಸಾಮಾಜಿಕ ಅಂಶಗಳ ಲಭ್ಯತೆಯನ್ನು ಪರಿಗಣಿಸುವುದಿಲ್ಲ. (ಯಾವುದಾದರೂ ಎರಡು) | 2 |
| 39. | ಜಾಗತೀಕರಣವು ಮಾನವನ ಆಹಾರ ಪದ್ಧತಿ ಮತ್ತು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೇಗೆ ?<br>***ಉತ್ತರ :***<br>* ಪ್ರಯೋಜನಕಾರಿಯಲ್ಲದ ಆಹಾರ ಸೇವನೆ ಜಾಸ್ತಿಯಾಗಿದೆ.<br>* ಸಾಂಪ್ರದಾಯಿಕ ಆಹಾರ ಸೇವನೆಗಳು, ಕ್ರಮೇಣ ನಿರ್ಮೂಲ ಹೊಂದುತ್ತವೆ.<br>* ಜನರ ಆರೋಗ್ಯದ ಅವನತಿ ಉಂಟಾಗಿ ಅನೇಕ ರೋಗರುಜಿನಗಳಿಗೆ ಎಡೆಮಾಡಿಕೊಡುತ್ತದೆ.<br>* ಮಾರಣಾಂತಿಕ ವೈರಾಣುಗಳಿಂದ ಹಬ್ಬುವ ರೋಗಗಳು ವಿಶ್ವದಾದ್ಯಂತ ಹಬ್ಬುತ್ತವೆ.<br>* ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ.<br>(ಯಾವುದಾದರೂ ಎರಡು) | 2 |
| 40. | ಪ್ಲಾಸಿ ಕದನದ ಫಲಿತಾಂಶಗಳೇನು ?<br>***ಉತ್ತರ :***<br>* ಅನೈಕ್ಯತೆ, ಅಸಂಘಟನೆ ಮತ್ತು ಲೋಭಿತನ ಪ್ರದರ್ಶಿಸಿತು.<br>* ಮೀರ್ ಜಾಫರ್ ಬಂಗಾಳದ ನವಾಬನಾದನು.<br>* ಬಂಗಾಳದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.<br>* ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಯುದ್ಧ ಪರಿಹಾರವಾಗಿ ಬ್ರಿಟಿಷರು ಪಡೆದರು. (ಯಾವುದಾದರೂ ಎರಡು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | 1857 ರ ಕ್ರಾಂತಿಗೆ ಕಾರಣವಾದ ರಾಜಕೀಯ ಅಂಶಗಳನ್ನು ತಿಳಿಸಿ.<br>*ಉತ್ತರ :*<br>* ಡಾಲ್‌ಹೌಸಿಯು ಹಲವಾರು ಸಂಸ್ಥಾನಗಳನ್ನು ವಶಪಡಿಸಿಕೊಂಡನು.<br>* ತಂಜಾವೂರು ಮತ್ತು ಕರ್ನಾಟಿಕ್ ನವಾಬರಿಗಿದ್ದ ರಾಜ ಪದವಿಗಳನ್ನು ರದ್ದುಪಡಿಸಿದರು.<br>* ಮೊಘಲ್ ಚಕ್ರವರ್ತಿ ಮತ್ತು ಔದ್‌ನ ನವಾಬರನ್ನು ಪದಚ್ಯುತಗೊಳಿಸಿದರು.<br>* ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.<br>(ಯಾವುದಾದರೂ ಎರಡು) | 2 |
| 42. | ಮೂರನೆ ಆಂಗ್ಲೋ–ಮೈಸೂರು ಯುದ್ಧದ ಫಲಿತಾಂಶಗಳೇನು ?<br>*ಉತ್ತರ :*<br>* ಶ್ರೀರಂಗಪಟ್ಟಣ ಒಪ್ಪಂದಕ್ಕೆ ಟಿಪ್ಪು ಸಹಿ ಹಾಕಿದನು.<br>* ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಟ್ಟನು.<br>* ಮೂರು ಕೋಟಿ ರೂಪಾಯಿಗಳನ್ನು ಯುದ್ಧನಷ್ಟ ಪರಿಹಾರವಾಗಿ ನೀಡಿದನು.<br>* ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ಕಳುಹಿಸಿದನು.<br>* ಸೆರೆ ಹಿಡಿಯಲಾಗಿದ್ದ ಸೈನಿಕರ ಬಿಡುಗಡೆ.<br>* ಬ್ರಿಟಿಷರ ಸಂಘಟಿತ ಸೈನ್ಯ ಹಿಂತೆಗೆತ. (ಯಾವುದಾದರೂ ಎರಡು) | 2 |
| 43. | ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶ / ಗುರಿಗಳೇನು ?<br>*ಉತ್ತರ :*<br>* ರಾಷ್ಟ್ರ ಭದ್ರತೆ<br>* ರಾಷ್ಟ್ರದ ಆರ್ಥಿಕ ಸಂವರ್ಧನೆ<br>* ಸಾಂಸ್ಕೃತಿಕ ಮೌಲ್ಯಗಳ ಬಿತ್ತರಿಸುವುದು<br>* ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾಧಿಸುವುದು<br>* ಮಿತ್ರರಾಷ್ಟ್ರಗಳನ್ನು ಹೆಚ್ಚಿಸಿಕೊಳ್ಳುವುದು<br>* ವಿರೋಧಿ ರಾಷ್ಟ್ರಗಳನ್ನು ಹತ್ತಿಕ್ಕುವುದು (ಯಾವುದಾದರೂ ನಾಲ್ಕು) $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | ಶ್ರಮ ವಿಭಜನೆಯ ಪ್ರಾಮುಖ್ಯತೆಯನ್ನು ವಿವರಿಸಿ.<br>***ಉತ್ತರ :***<br>* ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣತಿ<br>* ಆರ್ಥಿಕ ಲಾಭ<br>* ವರ್ಗ ವ್ಯವಸ್ಥೆಯ ಸೃಷ್ಟಿ<br>* ವ್ಯಾಪಾರ ವಾಣಿಜ್ಯೋದ್ಯಮಗಳ ವಿಸ್ತಾರ<br>* ಬಂಡವಾಳ ಹೂಡಿಕೆಯಲ್ಲಿ ಹೆಚ್ಚಳ<br>(ಯಾವುದಾದರೂ ನಾಲ್ಕು) 4 × ½ | 2 |
| 45. | ಭಾರತದ ವಾಯುಗುಣ ಋತುಗಳನ್ನು ಹೆಸರಿಸಿ.<br>***ಉತ್ತರ :***<br>* ಚಳಿಗಾಲ<br>* ಬೇಸಿಗೆ ಕಾಲ<br>* ಮಳೆಗಾಲ<br>* ನಿರ್ಗಮನ ಮಾನ್‌ಸೂನ್ ಮಾರುತಗಳ ಕಾಲ | 2 |
| 46. | ಭಾರತದಲ್ಲಿ ನೀರಾವರಿಯು ಅತ್ಯಗತ್ಯವಾಗಿದೆ. ಏಕೆ ?<br>***ಉತ್ತರ :***<br>* ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ.<br>* ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ.<br>* ಬೆಳೆಗಳ ಅಧಿಕ ಇಳುವರಿ ಮತ್ತು ಉತ್ಪಾದನೆಗೆ.<br>* ಭಾರತ ಕೃಷಿ ಪ್ರಧಾನ ದೇಶವಾಗಿದೆ. (ಯಾವುದಾದರೂ ಎರಡು) | 2 |
| 47. | ಸಕ್ಕರೆ ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವಬೀರುವ ಅಂಶಗಳಾವುವು ?<br>***ಉತ್ತರ :***<br>* ಕಬ್ಬು ಸರಬರಾಜು<br>* ಸಾರಿಗೆ ಸೌಲಭ್ಯ<br>* ಸರ್ಕಾರದ ಪ್ರೋತ್ಸಾಹ<br>* ವಿದ್ಯುತ್ ಪೂರೈಕೆ<br>* ಬಂಡವಾಳ ಪೂರೈಕೆ<br>* ಮಾರುಕಟ್ಟೆ ಸೌಲಭ್ಯಗಳು (ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | ವಿವಿಧ ತೆರಿಗೆಯೇತರ ವರಮಾನವನ್ನು ತಿಳಿಸಿ.<br>***ಉತ್ತರ :***<br>✳ ಭಾರತೀಯ ರಿಜರ್ವ್ ಬ್ಯಾಂಕಗಳಿಸುವ ಲಾಭ<br>✳ ರೈಲ್ವೆ ಗಳಿಸುವ ಲಾಭ<br>✳ ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ವರಮಾನ<br>✳ ಸಾರ್ವಜನಿಕ ಉದ್ಯಮಗಳು ಗಳಿಸುವ ವರಮಾನ<br>✳ ನಾಣ್ಯ ಮುದ್ರಣಾಲಯ ಮತ್ತು ಟಂಕಸಾಲೆಯಿಂದ ಬರುವ ವರಮಾನ<br>✳ ವಿವಿಧ ರೀತಿಯ ಶುಲ್ಕಗಳು, ದಂಡಗಳು<br>(ಯಾವುದಾದರೂ ನಾಲ್ಕು) 4 × ½ | 2 |
| 49. | ವಿಧಗಳು ಬ್ಯಾಂಕು ಖಾತೆಗಳ ಯಾವುವು ?<br>***ಉತ್ತರ :***<br>✳ ಉಳಿತಾಯ ಖಾತೆ<br>✳ ಚಾಲ್ತಿ ಖಾತೆ<br>✳ ಆವರ್ತ ಠೇವಣಿ ಖಾತೆ<br>✳ ನಿಶ್ಚಿತ ಠೇವಣಿ ಖಾತೆ | 2 |
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** 6 × 3 = 18 | |
| 50. | ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದು ಸಮರ್ಥಿಸಿ.<br>***ಅಥವಾ***<br>ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು. ಸಮರ್ಥಿಸಿ.<br>***ಉತ್ತರ :***<br>✳ ಫ್ರೆಂಚರು ಮತ್ತು ಇಂಗ್ಲಿಷರ ಭಾರತದ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ<br>✳ ಔರಂಗಜೇಬ್‌ನ ಮರಣ<br>✳ ಮೊಘಲರ ರಾಜಕೀಯ ಸಾರ್ವಭೌಮತ್ವ ಕುಗ್ಗಿತು<br>✳ ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿತು<br>✳ ಕರ್ನಾಟಿಕ್ ಪ್ರದೇಶದಲ್ಲಿ ಅಧಿಕಾರಕ್ಕಾಗಿ ಕಿತ್ತಾಟ<br>✳ ಚಿಕ್ಕ ದೇವರಾಜ ಒಡೆಯರ ಮರಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ಮೈಸೂರಿನಲ್ಲಿ ಉತ್ತರಾಧಿಕಾರತ್ವ ಸಮಸ್ಯೆ<br>✳ ಮರಾಠರು, ಹೈದರಾಬಾದಿನ ನಿಜಾಮ ಮತ್ತು ಅರ್ಕಾಟಿನ ನವಾಬರ ನಡುವೆ ಹೋರಾಟ<br>✳ ಆಂಗ್ಲೋ–ಮೈಸೂರು ಯುದ್ಧಗಳು ನಡೆದವು.<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ***<br>✳ ರಾಷ್ಟ್ರೀಯವಾದಿ ದೃಷ್ಟಿಕೋನಗಳ ಬೆಳವಣಿಗೆ<br>✳ ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗೆ ಪ್ರೋತ್ಸಾಹ<br>✳ ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆದವು<br>✳ ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು<br>✳ ಆಲೋಚನಾ ಕ್ರಮದಲ್ಲಿ ನಾವೀನ್ಯತೆ<br>✳ ಸ್ವಾತಂತ್ರ್ಯ ಚಳುವಳಿಯ ಮೇಲೆ ಪ್ರಭಾವ<br>✳ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಹಾಯ<br>(ಯಾವುದಾದರೂ ಆರು) $6 \times \frac{1}{2}$ | 3 |
| 51. | ಭಾರತದಲ್ಲಿ ನಿರುದ್ಯೋಗವು ಒಂದು ದೊಡ್ಡ ಸಮಸ್ಯೆಯಾಗಿ ಬೆಳೆದಿದೆ. ಏಕೆ ?<br>***ಅಥವಾ***<br>ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿ.<br>***ಉತ್ತರ :***<br>✳ ಮಿತಿಮೀರಿದ ಜನಸಂಖ್ಯೆ<br>✳ ಹೆಚ್ಚಾದ ತಂತ್ರಜ್ಞಾನದ ಬಳಕೆ<br>✳ ನೈಸರ್ಗಿಕ ಸಂಪನ್ಮೂಲಗಳ ಕೊರತೆ<br>✳ ಕೃಷಿಯ ಮೇಲಿನ ಅಧಿಕ ಅವಲಂಬನೆ<br>✳ ಗೃಹ ಕೈಗಾರಿಕೆಗಳ ನಾಶ<br>✳ ಕೌಶಲ್ಯ ಆಧಾರಿತ ಶಿಕ್ಷಣದ ಕೊರತೆ | 3 |
| | ***ಅಥವಾ***<br>✳ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು<br>✳ ಮೈತ್ರಿಯನ್ನು ಬೆಳೆಸುವುದು<br>✳ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು<br>✳ ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ಪಡೆಯುವುದು<br>✳ ನ್ಯಾಯ ಮತ್ತು ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ<br>✳ ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು. | 3 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | ಭಾರತದಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಜಾರಿಗೊಳಿಸಿರುವ ಕಾನೂನು ಕ್ರಮಗಳನ್ನು ವಿವರಿಸಿ. | |
| | ***ಅಥವಾ*** | |
| | ಸಂಘಟಿತ ದುಡಿಮೆ ವಲಯದ ಲಕ್ಷಣಗಳನ್ನು ವಿವರಿಸಿ. | |
| | ***ಉತ್ತರ :*** | |
| | ∗ ಸಂವಿಧಾನದ 17 ನೆಯ ವಿಧಿ | |
| | ∗ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ 1955 | |
| | ∗ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ 1976 | |
| | ∗ ಸಾರ್ವತ್ರಿಕ ಮತದಾನದ ಮತ್ತು ಸಮಾನತೆಯ ಹಕ್ಕು | |
| | ∗ ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ | |
| | ∗ ರಾಜ್ಯ ಸರ್ಕಾರಗಳಿಗೆ ವಿಶೇಷ ಜವಾಬ್ದಾರಿ 1989 | |
| | ∗ 15, 16, 17, 38 ಮತ್ತು 39ನೇ ವಿಧಿಗಳು | |
| | ∗ 16(4) ಮತ್ತು 320(4) ನೇ ವಿಧಿಗಳು | |
| | ∗ 29ನೇ ವಿಧಿ | |
| | ∗ 25ನೇ ವಿಧಿ | |
| | ∗ 330, 332 ಮತ್ತು 334 ನೇ ವಿಧಿಗಳು | |
| | (ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ*** | |
| | ∗ ನೋಂದಣಿಯಾಗಿ ಕಾನೂನಿನ ಚೌಕಟ್ಟಿನೊಳಗೆ | |
| | ∗ ದುಡಿಯುವ ಕಾರ್ಮಿಕರಿಗೆ ನಿಗದಿತ ಕೆಲಸ | |
| | ∗ ಉದ್ಯೋಗ ಭರವಸೆ | |
| | ∗ ನಿಗದಿತ ವೇತನ | |
| | ∗ ಉದ್ಯಮಿ ಮತ್ತು ಕಾರ್ಮಿಕರ ನಡುವೆ ಕಾನೂನಾತ್ಮಕವಾಗಿ ಸಂಬಂಧ | |
| | ∗ ಹೆಚ್ಚಿನ ದುಡಿಮೆಗೆ ಹೆಚ್ಚುವರಿ ವೇತನ | |
| | ∗ ತೆರಿಗೆ ಪಾವತಿ ಕಡ್ಡಾಯ | |
| | ∗ ವಾರ್ಷಿಕ ಭತ್ಯೆ, ಸಂಚಿತ ಸೌಲಭ್ಯ | |
| | ∗ ಉದ್ಯೋಗ ನಿಯಮಗಳು | |
| | (ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳು ಹೇಗೆ ಸಹಾಯಕವಾಗಿವೆ. ವಿವರಿಸಿ.<br>***ಅಥವಾ***<br>ನೈಸರ್ಗಿಕ ಮತ್ತು ಮಾನವ ಶಕ್ತಿಗಳೆರಡೂ ಭೂಕುಸಿತಕ್ಕೆ ಹೇಗೆ ಕಾರಣವಾಗುತ್ತವೆಂದು ವಿವರಿಸಿ.<br>***ಉತ್ತರ :***<br>* ಪ್ರಾಥಮಿಕ ಸರಕುಗಳ ಅವಲಂಬನೆ ಕಡಿಮೆಯಾಗುತ್ತದೆ.<br>* ಆಮದು ಕಡಿಮೆಯಾಗುತ್ತದೆ.<br>* ರಾಷ್ಟ್ರಾದಾಯ ಹೆಚ್ಚಾಗುತ್ತದೆ.<br>* ತಲಾದಾಯ ಹೆಚ್ಚಾಗುತ್ತದೆ.<br>* ವಿದೇಶೀ ವಿನಿಮಯ ಗಳಿಕೆಯಲ್ಲಿ ವೃದ್ಧಿ<br>* ಉದ್ಯೋಗಾವಕಾಶಗಳ ಹೆಚ್ಚಳ<br>* ಜಿಡಿಪಿ ಹೆಚ್ಚಳ<br>* ಜನರ ಜೀವನಮಟ್ಟದಲ್ಲಿ ಸುಧಾರಣೆ<br>* ಕೃಷಿ ಅಭಿವೃದ್ಧಿ<br>* ತೃತೀಯ ವಲಯದ ಅಭಿವೃದ್ಧಿ<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ***<br>* *ನೈಸರ್ಗಿಕ ಕಾರಣಗಳು :*<br>  * ಸಮುದ್ರದ ಅಲೆಗಳಿಂದ ಸವೆತ<br>  * ಅತ್ಯಧಿಕ ಮಳೆಯಿಂದ ಸವೆತ<br>  * ಭೂಕಂಪನದಿಂದ ಕುಸಿತ<br>* *ಮಾನವ ಕೃತ್ಯಗಳು :*<br>  * ಅರಣ್ಯ ನಾಶ<br>  * ರೈಲು ರಸ್ತೆಗಳು ಮತ್ತು ಅಣೆಕಟ್ಟುಗಳ ನಿರ್ಮಾಣ<br>  * ಜಲಾಶಯ ಮತ್ತು ಜಲವಿದ್ಯುತ್ ಯೋಜನೆಗಳ ನಿರ್ಮಾಣ<br>  * ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ<br>(ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 54. | ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಗಳೇನು ? | |
| | ***ಅಥವಾ*** | |
| | ಸಾರ್ವಜನಿಕ ವೆಚ್ಚದ ಗುರಿ / ಉದ್ದೇಶಗಳೇನು ? | |
| | ***ಉತ್ತರ :*** | |
| | ✳ ನೋಟು ಚಲಾವಣೆಯ ಏಕಸ್ವಾಮ್ಯ | |
| | ✳ ಸರ್ಕಾರದ ಬ್ಯಾಂಕು ಆಗಿ ಕಾರ್ಯನಿರ್ವಹಣೆ | |
| | ✳ ಬ್ಯಾಂಕುಗಳ ಬ್ಯಾಂಕು ಆಗಿ ಕಾರ್ಯನಿರ್ವಹಣೆ | |
| | ✳ ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ | |
| | ✳ ಸಾಲ ಪ್ರಮಾಣದ ನಿಯಂತ್ರಕ | |
| | ✳ ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ | |
| | ✳ ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ | |
| | (ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ*** | |
| | ✳ ಆರ್ಥಿಕ ಬೆಳವಣಿಗೆ ತೀವ್ರಗೊಳಿಸುವುದು | |
| | ✳ ಉದ್ಯಮ, ವ್ಯವಹಾರ ಮತ್ತು ವಾಣಿಜ್ಯಗಳನ್ನು ಪ್ರೋತ್ಸಾಹಿಸುವುದು | |
| | ✳ ಸಮತೋಲಿತ ಪ್ರಾದೇಶಿಕ ಬೆಳವಣಿಗೆ | |
| | ✳ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ | |
| | ✳ ಸಾಮಾಜಿಕ, ಆರ್ಥಿಕ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು | |
| | ✳ ಸಂಪೂರ್ಣ ಉದ್ಯೋಗ ಸಾಧಿಸುವುದು | |
| | ✳ ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು | |
| | (ಯಾವುದಾದರೂ ಆರು) $6 \times \frac{1}{2}$ | 3 |
| 55. | ಉದ್ಯಮಿಯ ಕಾರ್ಯಗಳನ್ನು ಪಟ್ಟಿ ಮಾಡಿ. | |
| | ***ಅಥವಾ*** | |
| | ಬ್ಯಾಂಕಿನಲ್ಲಿ ಖಾತೆ ತೆರೆಯುವುದರಿಂದಾಗುವ ಉಪಯೋಗಗಳನ್ನು ಪಟ್ಟಿ ಮಾಡಿ. | |
| | ***ಉತ್ತರ :*** | |
| | ✳ ವ್ಯಾಪಾರ ಚಟುವಟಿಕೆಗಳಿಗೆ ಯೋಜನೆ | |
| | ✳ ಉತ್ಪಾದನಾಂಗಗಳ ಸಂಯೋಜನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ನಿರ್ಧಾರ ಕೈಗೊಳ್ಳುವುದು<br>* ಅಂಶಗಳ ಸಮಂಜಸ ಸಂಯೋಜನೆ<br>* ಹೊಸ ವಿಧಾನಗಳನ್ನು ರೂಢಿಗೆ ತರುವುದು<br>* ಹಣಕಾಸಿನ ಆಯವ್ಯಯ ನಿಭಾಯಿಸುವುದು<br>* ನಷ್ಟ ಮತ್ತು ಅನಿಶ್ಚಿತತೆಗಳ ಎದುರಿಸುವುದು<br>* ಮಾರ್ಗದರ್ಶನ ನೀಡುವುದು<br>(ಯಾವುದಾದರೂ ಆರು) 6 × ½ | 3 |
| | ***ಅಥವಾ*** | |
| | * ಹಣದ ಭದ್ರತೆ ಕಾಪಾಡುವುದು<br>* ಹಣದ ಪಾವತಿಗಳನ್ನು ಮಾಡಲು ಸಹಾಯ<br>* ಸಾಲ ಪಡೆಯಲು ಸಾಧ್ಯ<br>* ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ<br>* ಹಣವನ್ನು ವಸೂಲು ಮಾಡಲು ಸಹಾಯ<br>* ಭದ್ರತಾ ಕಪಾಟುಗಳನ್ನು ಪಡೆಯಬಹುದು<br>(ಯಾವುದಾದರೂ ಆರು) 6 × ½ | 3 |
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** 1 × 4 = 4 | |
| 56. | ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರು ಸಂಘಟಿಸಿದ ಪ್ರತಿಭಟನೆಗಳು ಪ್ರಮುಖವಾಗಿದ್ದವೆಂಬುದನ್ನು ವಿವರಿಸಿ.<br>***ಉತ್ತರ :***<br>* ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಾರ್ಕ್ಸ್‌ವಾದಗಳಿಂದ ಪ್ರಭಾವ<br>* ಜಮೀನ್ದಾರರು ಮತ್ತು ಯೂರೋಪಿಯನ್ ಪ್ಲಾಂಟರ್‌ಗಳ ವಿರುದ್ಧ ದಂಗೆ<br>* ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು<br>* ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು<br>* ಚಂಪಾರಣ್ಯ, ಖೇಡಾಗಳಲ್ಲಿ ಗಾಂಧೀಜೀಯವರ ಪ್ರಭಾವ<br>* ತೇಭಾಗ ಮತ್ತು ಮಲಬಾರ್‌ಗಳಲ್ಲಿ ವಿರೋಧ<br>* ಅಸಹಕಾರ ಆಂದೋಲನ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ಕಿಸಾನ್ ಸಭಾದ ಹೋರಾಟ<br>✳ ತೆಲಂಗಾಣದ ರೈತರು, ಜಮೀನ್ದಾರರು ಮತ್ತು ರಜಾಕರ ವಿರುದ್ಧ ಹೋರಾಟ<br>✳ ಬಂಗಾಳದ ರೈತರು ಜಮೀನ್ದಾರರ ಶೋಷಣೆ ವಿರುದ್ಧ ದಂಗೆ<br>✳ ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ<br>(ಯಾವುದಾದರೂ ಎಂಟು) 8 × ½ | 4 |
| VI. 57. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4<br>a) ಇಂದಿರಾ ಕೋಲ್<br>b) ಕಾವೇರಿ ನದಿ<br>c) ದೆಹಲಿ | |



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)*** | |
| | ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು ? | |
| | ∗ ನೀರಾವರಿ ಪೂರೈಕೆ | |
| | ∗ ಪ್ರವಾಹಗಳ ನಿಯಂತ್ರಣ | |
| | ∗ ಜಲವಿದ್ಯುತ್ ತಯಾರಿಕೆ | |
| | ∗ ಮಣ್ಣಿನ ಸವೆತ ನಿಯಂತ್ರಣ | |
| | ∗ ಒಳನಾಡಿನ ನೌಕಾಯಾನ | |
| | ∗ ಒಳನಾಡಿನ ಮೀನುಗಾರಿಕೆ | |
| | ∗ ಮನರಂಜನೆ | |
| | ∗ ಗೃಹ ಬಳಕೆಗೆ ನೀರು | |
| | ∗ ಕೈಗಾರಿಕೆಗಳಿಗೆ ನೀರು | |
| | ∗ ಅರಣ್ಯ ಪೋಷಣೆ | |
| | ∗ ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಬಳಕೆ | |
| | (ಯಾವುದಾದರೂ ಎಂಟು) $8 \times \frac{1}{2}$ | 4 |